(ಅ) ಈ ಮಲಿನತೆಯಿಂದ ಅಮ್ಮಸಂದ್ರ ತೆಂಗಿನ ಮರಗಳ ಬೆಳವಣಿಗೆಗೆ ಕುಂದು ಮತ್ತು ಹರಿಹರದಲ್ಲಿ ನೀರು ಮಲಿನಗೊಂಡು ಕುಡಿಯಲು ಯೋಗ್ಯವಾಗಿಲ್ಲವೆಂಬುದು ನಿಜವೇ;

(ಇ) 'ಅ ಮತ್ತು ಆ'ರಲ್ಲಿ ತಿಳಿಸಿದ ಮಲಿನತೆಯನ್ನು' ನಿಯಂತ್ರಿಸುವ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು).—

(ಅ) ಹೌದು.

(ಆ) ಹೌದು.

(ಇ) (ಅ) ಸರ್ಕಾರವು ಸದರಿ ಕಾರ್ಖಾನೆಗೆ ಧೂಳನ್ನು ನಿಯಂತ್ರಿಸಿ ವಾಯು ಮಲಿನತೆಯನ್ನು ತಡೆಯಲು ಬೇಕಾದ ಉಪಕರಣಗಳನ್ನು ಹಾಕಲು ಸತತವಾಗಿ ತಿಳಿಸುತ್ತಾ ಬಂದಿದೆ. ಈ ಕಾರ್ಖಾನೆಯು ತನ್ನಲ್ಲಿರುವ ನಾಲ್ಕು ಆವಿಗಳಿಗೆ (Kilns) ಎಲೆಕ್ಟ್ರೋಸ್ಟ್ಯಾಟಿಕ್ ಪ್ರೆಸಿಪಿಟೇಟರ್ಸ್‌ಗಳನ್ನು (Electrostatic Precipitators) ಅಳವಡಿಸಿದೆ. ಈ ನಾಲ್ಕರಲ್ಲಿ ಎರಡು ಆವಿಗಳಿಗೆ ಎಲೆಕ್ಟ್ರೋಸ್ಟ್ಯಾಟಿಕ್ ಪ್ರೆಸಿಪಿಟೇಟರ್ಸ್ (ESPS) ಸಾಮರ್ಥ್ಯವನ್ನು ಹೆಚ್ಚಿಸಲು ಕಂಡಿಷನ್ ಟವರುಗಳನ್ನು ಜೋಡಿಸಿದೆ.

ಈ ನಾಲ್ಕು ಆವಿಗಳಿಗೆ ಜೋಡಿಸಿರುವ ಎಲೆಕ್ಟ್ರೋಸ್ಟ್ಯಾಟಿಕ್ ಪ್ರೆಸಿಪಿಟೇಟರ್ಸ್‌ಗಳಲ್ಲಿ 2 ಯಂತ್ರಗಳು ಕೆಲಸ ಮಾಡುತ್ತಿಲ್ಲ. ಈ ಎರಡು ಉಳಿದ ಯಂತ್ರಗಳಿಗೆ ಹೆಚ್ಚಿನ ಕಂಡಿಷನ್ ಟವರ್ಸ್‌ನ್ನು ಜೋಡಿಸಬೇಕಾಗಿರುತ್ತದೆ. ಕಟ್ಟಿರುವ ಎಲೆಕ್ಟ್ರೋಸ್ಟ್ಯಾಟಿಕ್ ಪ್ರೆಸಿಪಿಟೇಟರ್ಸ್ (ESPS) ಗಳನ್ನು ಕಾರ್ಯರೂಪಕ್ಕೆ ತರಲು ಮತ್ತು ಇನ್ನೆರಡು ಕಂಡಿಷನ್ ಟವರ್‌ಗಳನ್ನು ಹಾಕಲು ಕಾರ್ಖಾನೆಯವರಿಗೆ ಆದೇಶ ಕೊಡಲಾಗಿದೆ. ಗಾಳಿ (ನಿವಾರಣ ಮತ್ತು ನಿಯಂತ್ರಣ) ಕಾಯಿದೆ 1981 ಯನ್ನು ಜಾರಿಗೊಳಿಸಲು ನಿಯಮಗಳು ರಚಿಸಲಾಗುತ್ತಿದೆ ಮತ್ತು ನಿಯಮಗಳು ಜಾರಿಗೆ ಬಂದ ಕೂಡಲೆ ಸರಕಾರದವರು ಉಗ್ರಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

(ಆ) ಹರಿಹರ ಪಾಲಿಫೈಬರ್, ಹರಿಹರ.

ಸದರಿ ಕಾರ್ಖಾನೆಯು ಕಲುಷಿತ ನೀರನ್ನು ಶುದ್ಧೀಕರಿಸಲು ಒಂದು ಕ್ಲಾರಿಫೈಯರನ್ನು ಹೊಂದಿದ್ದು ಅದರಿಂದ ಶುಚಿಗೊಂಡ ನೀರನ್ನು ತುಂಗಭದ್ರಾ ನದಿಗೆ ಬಿಡುತ್ತಿತ್ತು. ಹೀಗೆ ಬಿಟ್ಟ ನೀರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯು ನಿಗದಿಪಡಿಸಿದ ಗುಣಮಟ್ಟವನ್ನು ಹೊಂದಿರಲಿಲ್ಲವಾದ್ದರಿಂದ ಸದರಿ ಕಾರ್ಖಾನೆಯವರಿಗೆ ನಿಗದಿಪಡಿಸಿದ ಗುಣ ಮಟ್ಟಕ್ಕೆ ಬರಲು ಬೇಕಾದ ಹೆಚ್ಚುವರಿ ಸಂಸ್ಕರಣ ಘಟಕಗಳನ್ನು ಹಾಕಲು ಈ ಮಂಡಳಿಯು ಆದೇಶವನ್ನು ನೀಡಿತು. ಕಾರ್ಖಾನೆಯವರು ಈ ಘಟಕಗಳನ್ನು ಹಂತಹಂತವಾಗಿ ಅಳವಡಿಸುತ್ತಿದ್ದಾರೆ. ಇದನ್ನು ಪೂರ್ತಿ ಮಾಡಲು 31–8–1983ರ ವರೆಗೆ ಕಾಲಾವಕಾಶ ಕೊಡಲಾಗಿತ್ತು. ಆದರೆ ಕಾರ್ಖಾನೆಯಲ್ಲಿ ಸಂಪು ಮತ್ತು ಬೀಗಮುದ್ರೆಗಳಿಂದ ಸಂಸ್ಕರಣ ಘಟಕಗಳ ನಿರ್ಮಾಣ ಕಾರ್ಯ ಕುಂಠಿತಗೊಂಡಿರುವುದರಿಂದ ಸಧರಿ ಕಾರ್ಖಾನೆಯವರು ಫೆಬ್ರುವರಿ 1984ರ ವರೆಗೆ ಕಾಲಾವಕಾಶವನ್ನು ಕೇಳಿರುತ್ತಾರೆ. ಸಂಸ್ಕರಣ ಘಟಕಗಳ ನಿರ್ಮಾಣದಲ್ಲಿ ಕಾರ್ಖಾನೆಯವರು ಮಾಡಿರುವ ಪ್ರಗತಿಯನ್ನು ಮತ್ತು ಸಂಪು ಮತ್ತು ಬೀಗಮುದ್ರೆಯ ಕಾಲಾವಧಿಯನ್ನು ಗಣನೆಗೆ ತೆಗೆದುಕೊಂಡು ಸಂಸ್ಕರಣ ಘಟಕಗಳ ಉಳಿದ ಕಾರ್ಯವನ್ನು ಪೂರ್ತಿಮಾಡಲು ಕಾರ್ಖಾನೆಯವರಿಗೆ 31–12–1983ರ ವರೆಗೆ ಕಾಲಾವಕಾಶವನ್ನು ನೀಡಲಾಯಿತು. ಕಾರ್ಖಾನೆಯವರು ಸಂಸ್ಕರಣ ಘಟಕಗಳ ಕಾರ್ಯವನ್ನು ನಿಗದಿ ಪಡಿಸಿದ ದಿನಾಂಕದಲ್ಲಿ ಪೂರೈಸದಿದ್ದರೆ, ಜಲ (ಮಾಲಿನ್ಯ ಮತ್ತು ನಿಯಂತ್ರಣ) ಕಾಯಿದೆ 1974ರ ಪ್ರಕಾರ ಕಾರ್ಖಾನೆಯ ಮೇಲೆ ಕ್ರಮವನ್ನು ಕೈಗೊಳ್ಳಲಾಗುವುದು.

ವಿಷಯ: ಸರ್ಕಾರಿ ನೌಕರರ ವರ್ಗಾವಣೆ.

ಪ್ರ. 131 (115) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ),— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ದಿನಾಂಕ 10–1–1983 ರಿಂದ ಜೂನ್ ತಿಂಗಳವರೆಗೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮಾಡಲಾದ ವರ್ಗಾವರ್ಗಿ ಸಂಖ್ಯೆ ಎಷ್ಟು;

(ಆ) ಅದರಲ್ಲಿ, ಅವಧಿಪೂರ್ವ ವರ್ಗಾವರ್ಗಿ ಸಂಖ್ಯೆ ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು).—

(ಅ) 19,918 (ಕಂದಾಯ ಮತ್ತು ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಗಳ ಆಡಳಿತ ನಿಯಂತ್ರಣಕ್ಕೆ ಒಳಪಡುವ ಇಲಾಖೆಗಳನ್ನುಹೊರತು ಪಡಿಸಿ).

(ಆ) 3,315 (ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಇಲಾಖೆ, ವಿದ್ಯಾ ಇಲಾಖೆ ಕಂದಾಯ ಇಲಾಖೆ ಮತ್ತು ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆಗಳ ಆಡಳಿತ ನಿಯಂತ್ರಣಕ್ಕೆ ಒಳಪಡುವ ಇಲಾಖೆಗಳನ್ನು ಹೊರತುಪಡಿಸಿ).